ಈ ದಿನ ನ್ಯಾಯಾಲಯದಲ್ಲಿ ಸಾಕ್ಷಿ ನ್ಯಾಯಾಲಯದ ನೋಟೀಸಿನ ಪ್ರಕಾರ ಹಾಜರಾಗಿದ್ದು ಕೋವಿಡ್ ಟೆಸ್ಟ್ (ಪರೀಕ್ಷೆ ಮಾಡಿಸಿಕೊಂಡು Negative ಆದ ಬಗ್ಗೆ ದಾಖಲೆಯನ್ನು ಹಾಜರಮಾಡಿರುತ್ತಾರೆ.

ಸಾಕ್ಷಿಯನ್ನು ದಿಃ **21-12-2020** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಪ್ರತಿವಾದಿ 2 ರ ಪರವಾಗಿ ಶ್ರೀ ಎಂ ಎಸ್ ಪಿ ವಕೀಲರಿಂದಃ

ನಾನು ಕಳೆದ ಮುದ್ದತ್ತಿನಲ್ಲಿ ನ್ಯಾಯಾಲಯದಲ್ಲಿ ದಾಖಲು ಮಾಡಿದ ಪ್ರಕರಣದಲ್ಲಿ ನಮೂದು ಮಾಡಿದ ಸಿ ಟಿ ಎಸ್ ನಂಬರಗಳಲ್ಲಿ ಯಾವ ಯಾವ ಸಿ ಟಿ ಎಸ್ ನಂಬರಗಳಲ್ಲಿ ಜಂಟಿಯಾಗಿ ಹೆಸರು ನಮೂದಾಗಿದೆ ಹಾಗೂ ಯಾವ ಸಿ ಟಿ ಎಸ್ ದಾಖಲೆಗಳಲ್ಲಿ ಒಬ್ಬರೇ ಹೆಸರು ನಮೂದಗಿ ಎಂದು ನೋಡಿಕೊಂಡು ಬಂದು ಹೇಳುವುದಾಗಿ ಹೇಳಿದ್ದೀರಿ ಈಗ ದಾಖಲೆಯನ್ನು ನೋಡಿಕೊಂಡು ಬಂದ್ದೀರಾ ಎಂದರೆ ಸಾಕ್ಷಿ 24 ಸಿ ಟಿ ಎಸ್ ನಂಬರಗಳು ಇವೆ ಅವುಗಳನ್ನು ನೆನಪು ಇಟ್ಟುಕೊಳ್ಳಲು ಆಗದೆ ಇರುವುದರಿಂದ ಉತ್ತರ ಹೇಳಲು ಆಗುವುದಿಲ್ಲ ಎಂದು ಹೇಳಿ ನಂತರ 10 ಸಿ ಟಿ ಎಸ್ ನಂಬರಗಳಲ್ಲಿ ನೆನಪಿದೆ ಎಂದು ಹೇಳುತ್ತಾರೆ. ಸಾಕ್ಷಿ ಮತ್ತೆ ನುಡಿಯುತ್ತಾರೆ ಸಿ ಟಿ ಎಸ್ 10 ರಲ್ಲಿ 1/3 ಶೇರು ಎಂದು 11 ರಲ್ಲಿ ವಯಕ್ತಿಕವಾಗಿ ನನ್ನ ಗಂಡನ ಹೆಸರು ಇದೆ ಎಂದು ಹೇಳುತ್ತಾರೆ. ಇನ್ನೆರಡಲ್ಲಿ ½ ಎಂದು ಇದೆ ಎಂದು ಹೇಳುತ್ತಾರೆ. ಒಂದರಲ್ಲಿ 1/3 ಇದ್ದುದು ಈಗ ½ ಆಗಿದೆ ಎಂದು ಹೇಳುತ್ತಾರೆ. 2015 ರಲ್ಲಿ ಅಂದರೆ ಈ ದಾವೆ ಹಾಕುವ ಕಾಲಕ್ಕೆ ದಾವಾ ಆಸ್ತಿಗಳ ಪೈಕಿ ಸಿ ಟಿ ಸರ್ವೇ ಗೆ ಸಂಬಂಧಪಟ್ಟ ಆಸ್ತಿಗಳ ಉತಾರಗಳನ್ನು ಹಾಕಿಲ್ಲ ಎಂದರೆ ಸರಿ ಅಲ್ಲ. ನಾನು 2015 ರ ಸಾಲಿನ ಸಿ ಟಿ ಸರ್ವೇ ಉತಾರಗಳನ್ನು ಹಾಜರು ಮಾಡಿದ್ದರೆ ಆ ಸಾಲಿನಲ್ಲಿ ಯಾರ ಹೆಸರು ಉತಾರದಲ್ಲಿ ನಮೂದಾಗಿರುತ್ತೆದೆಯೋ ಅದು ಗೊತ್ತಾಗುತ್ತದೆ ಎಂದರೆ ಸರಿ. ನಾನು ಹಾಜರು ಮಾಡಿದ್ದೇನೆ ಎಂದು ಹೇಳುವ ಸಿ ಟಿ ಸರ್ವೇ ಉತಾರ ಅಂದರೆ ಈಗ ನನಗೆ ತೋರಿಸಿದಂತಹ ನಿಪಿ- 5 ರಿಂದ 19 ಎಂದರೆ ಸರಿ. ಸಿ ಟಿ ಸರ್ವೇ ಗೆ ಸಂಬಂಧಪಟ್ಟಂತೆ ಒಂದು ರೂಲ್ಡ್ ಕಾರ್ಡ ಮತ್ತು ಸಿ ಟಿ ಎಸ್ ಉತಾರ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ರೂಲ್ಡ ಕಾರ್ಡಿನಲ್ಲಿ ವ್ಯವಹರಿಸಿದ ಬಗ್ಗೆ ದಾಖಲೆ ಇರುತ್ತದೆ. ಸಿ ಟಿ ಸರ್ವೇ ಉತಾರದಲ್ಲಿ ಆ ಸಾಲಿನ ಮಾಲೀಕರ ಹೆಸರು ಇರುತ್ತದೆ ಎಂದರೆ ಸರಿ. ನಿಪಿ- 5 ರಿಂದ 19 ರೂಲ್ಡ್ ಕಾರ್ಡ ಎಂದರೆ ಸರಿ. ದಾವೆ ಹಾಕುವ ಕಾಲಕ್ಕೆ ಸ್ಥಿರಾಸ್ತಿಗೆ ಸಂಬಂಧಪಟ್ಟಂತೆ ದಾವೆ ಹಾಕಿದಲ್ಲಿ ಭೂ

ಕಂದಾಯ ಅಧಿನಿಯಮ 132 ಪ್ರಕಾರ ಕಡ್ಡಾಯವಾಗಿ ಆಯಾ ಆಯಾ ಆಸ್ತಿಗಳ ಉತಾರ ವನ್ನು ಹಾಕಬೇಕು ಎಂದರೆ ಸರಿ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ 2015 ಸಾಲಿನ ಉತಾರಗಳನ್ನು ಹಾಜರು ಮಾಡಿದರೆ ಯಾರು ಯಾರು ಮಾಲೀಕರು ಎಂಬುದು ಗೊತ್ತಾಗುತ್ತದೆ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

**ಸಹಿ: 21-12-2020**
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.